## ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.

## ಸಿ.ಸಿ. ನಂ.2422/2025

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ವೆಂಕಟೇಶ್ ಕೆ. | ಸಿ.ಡಬ್ಲ್ಯೂ-43 |
| ತಂದೆಯ ಹೆಸರು | : | ಕರಿಯಪ್ಪ | ಪಿ.ಡಬ್ಲ್ಯೂ-05 |
| ವಯಸ್ಸು | : | 42 ವರ್ಷ | |
| ಉದ್ಯೋಗ | : | ಮುಖ್ಯ ಪೇದೆ | |
| ವಾಸಸ್ಥಳ | : | ಚಳ್ಳಕೆರೆ | ದಿಃ 12-02-2026. |

### ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ

ಆಗಸ್ಟ್  2024 ರಿಂದ ಇಲ್ಲಿಯವರೆಗೆ  ನಾನು ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ. ಅಂತ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 17.08.2025 ರಂದು ನಾನು ಠಾಣೆಯಲ್ಲಿದ್ದಾಗ ಮಧ್ಯಾಹ್ನ 12.05 ರ ಸಮಯದಲ್ಲಿ  ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ  ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 377/2025 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇಸಿಕೊಂಡಿರುತ್ತೇನೆ.

ಸಾಕ್ಷಿಗೆ ನಿಪಿ.1 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.  ಸಾಕ್ಷಿಯ ಸಹಿಯನ್ನು ನಿಪಿಃ 1(ಬಿ) ಅಂತ ಗುರುತಿಸಲಾಯಿತು.

ಸಾಕ್ಷಿಗೆ ಪ್ರ.ವ.ವರದಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪ್ರ.ವ.ವರದಿಯನ್ನು  ನಿಪಿಃ8 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 8(ಎ) ಅಂತ ಗುರುತಿಸಲಾಯಿತು.

ದಿನಾಂಕ 18.08.2025 ರಂದು ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1 ರವರು ಸ್ಥಳ  ತೋರಿಸಿದ ಮೇರೆಗೆ ಮಧ್ಯಾಹ್ನ 02-30 ರಿಂದ 03-15 ರವರೆಗೆ ಕೃತ್ಯ ನಡೆದ ಸ್ಥಳ ದಲ್ಲಿ ಮಹಜರ್ ಕ್ರಮ ಜರುಗಿಸಿರುತ್ತೇನೆ. ಮಹಜರ್ ಸಮಯದಲ್ಲ ಚಾಸಾ-42 ರವರಿಂದ ಭಾವಚಿತ್ರವನ್ನು ತೆಗೆಸಿರುತ್ತೇನೆ.

ನಂತರ ಮುಂದಿನ ತನಿಖೆಗಾಗಿ ಪ್ರಕರಣ ಕಡತವನ್ನು ಚಾಸಾ-44 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಗೆ ನಿಪಿ.2  ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ., ಸಾಕ್ಷಿಯ ಸಹಿಯನ್ನು ನಿಪಿಃ 2(ಸಿ) ಅಂತ ಗುರುತಿಸಲಾಯಿತು.

ಸಾಕ್ಷಿಯು ನಿಪಿ.3 ರ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಟಿ.ಎಸಿ.ಎಂ., ಆರೋಪಿ ಪರ ವಕೀಲರಿಂದಃ**

ದಿನಾಂಕ 17.08.2025 ರ ಪೂರ್ವದಲ್ಲಿ ಚಾಸಾ-1 ರವರು ಠಾಣೆಗೆ ಬಂದು ದೂರನ್ನು ದಾಖಲಿಸಿರುವುದಿಲ್ಲ. ನಿಪಿ.1 ಅನ್ನು ಚಾಸಾ-1 ರವರು ನೀಡಿರುತ್ತಾರೆ. ನಿಪಿ.1 ಅನ್ನು ಎಲ್ಲಿ ಟೈಪ್ ಮಾಡಿಸಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಚಾಸಾ-1 ರವರು ಗಣಕೀಕೃತ ದೂರನ್ನು ದಾಹಲಿಸಿರುತ್ತಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ತಡವಾಗಿ ದೂರನ್ನು ದಾಖಲಿಸಿರುವ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು ಯಾವ ಗ್ರಾಮದವರು ಎಂಬುವುದಕ್ಕೆ ಸಂಬಂಧಿಸಿದ ಪೂರವಾದ ದಾಖಲೆಗಳನ್ನು ಪಡೆದಿರುವುದಿಲ್ಲ. ಚಾಸಾ-2 ಮತ್ತು 3 ರವರಿಗೆ ಮಹಜರಿಗೆ ಹಾಜರಾಗಲು ನೋಟೀಸ್ ನೀಡಿರುತ್ತೇನೆ. ಚಾಸಾ-2 ಮತ್ತು 3 ರವರನ್ನು ಪಂಚರಾಗಿ ಬರಮಾಡಿಕೊಂಡಿದ್ದೆವು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.2 ಅನ್ನು ಠಾಣೆಯಲ್ಲಿ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ ನಿಪಿ.2 ಕ್ಕೆ ಪಂಚರ ಸಹಿಯನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.3 ಅನ್ನು ಮಹಜರ್ ಸಮಯದಲ್ಲಿ ತೆಗೆಯಲಾಗಿರುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.3 ಅನ್ನು ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ